ದಿಃ 26.02.2026

**ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.1279/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಾಜಶೇಖರಪ್ಪ.ಪಿ | ಪ್ರಾ ಸಾಃ 6 |
| ತಂದೆಯ ಹೆಸರು | : | ವಿ.ಎಸ್.ಪರಮೇಶ್ವರಪ್ಪ | ಚಾಸಾಃ 10 |
| ವಯಸ್ಸು | : | 59 ವರ್ಷ | |
| ಕೆಲಸ | : | ಅಬಕಾರಿ ಉಪ ನಿರೀಕ್ಷಕರು, ಚಿತ್ರದುರ್ಗ ಅಬಕಾರಿ ಉಪ ಆಯುಕ್ತರ ಕಛೇರಿ, ಚಿತ್ರದುರ್ಗ | ಸಾ ಪ್ರ ಬೋ |
| ವಾಸ | : | ಚಿತ್ರದುರ್ಗ | ದಿಃ26.02.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ನಾನು ಜನವರಿ 2022 ರಿಂದ ಅಕ್ಟೋಬರ್ 2025 ರವರೆಗೆ ಅಬಕಾರಿ ವಲಯ, ಹೊಳಲ್ಕೆರೆಯಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿನಾಂಕ 18.06.2024 ರಂದು ಚಾಸಾ-9 ರವರಿಂದ ಕಡತವನ್ನು ಸ್ವೀಕರಿಸಿಕೊಂಡು ಅಲ್ಲಿಯವರಿಗಿನ ತನಿಖೆಯನ್ನು ಪರೀಶಿಲಿಸಿರುತ್ತೇನೆ. ಸಾಕ್ಷಿದಾರರಾದ ಚಾಸಾ-1 ಮತ್ತು 2 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಸಿಬ್ಬಂದಿಗಳಾದ ಚಾಸಾ-4 ರಿಂದ 6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಆರೋಪಿತನ ಸ್ವ-ಇಚ್ಚಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಇಲಾಖೆಯಿಂದ ಅನುಮೋದನೆಯನ್ನು ಪಡೆದುಕೊಂಡು ಆರೋಪಿತನ ವಿರುದ್ಧ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ಆರೋಪಿತನ ಸ್ವ-ಇಚ್ಚಾ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಹೇಳಿಕೆಯನ್ನು ನಿಪಿ-15 ಎಂದು, ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಿದ್ದು, ಆರೋಪಿಯ ಸಹಿಯನ್ನು ನಿಪಿ-15(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಕೆ.ಪಿ ವಕೀಲರಿಂದ**

3. ನಾನು ಚಾಸಾ-2 ರಿಂದ 5 ರವರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ.

ದಿಃ 26.02.2026

ಅಮಾನತ್ತುಪಡಿಸಿಕೊಂಡ ಮದ್ಯದ ಪೌಚುಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕೆ ಸಂಖ್ಯೆಯ ಸಲುವಾಗಿ ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ